ಮೇ 18, 2006

## ಬ್ಯಾಂಕ್ ಶುಲ್ಕಗಳ ನ್ಯಾಯ ಸಮ್ಮತತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಒಂದು ಯೋಜನೆಯನ್ನು ರೂಪಿಸಲು ಆರ್‌ಬಿಐ ನಿಂದ ಕಾರ್ಯ ತಂಡದ ರಚನೆ

ಬ್ಯಾಂಕ್ ಶುಲ್ಕಗಳ ನ್ಯಾಯ ಸಮ್ಮತತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಾಗೂ ಅದನ್ನು ನ್ಯಾಯ ಸಮ್ಮತ ಆಚರಣಾ ಸಂಹಿತೆಯಲ್ಲಿ ಸೇರಿಸುವ ಬಗ್ಗೆ ಒಂದು ಯೋಜನೆಯನ್ನು ರೂಪಿಸಲು ಆರ್‌ಬಿಐ ಇಂದು ಒಂದು ಕಾರ್ಯ ತಂಡವನ್ನು ರಚಿಸಿತು. ಬ್ಯಾಂಕಿಂಗ್ ಸಂಹಿತೆ ಹಾಗೂ ಭಾರತ ಮಾನಕಗಳ ಮಂಡಲಿ, ಅನುಸರಣೆಯ ಉಸ್ತುವಾರಿ ಮಾಡುತ್ತವೆ. ಕಾರ್ಯತಂಡದ ಸದಸ್ಯರು:–

1. ಶ್ರೀ ಎನ್. ಸದಾಶಿವನ್, ಬ್ಯಾಂಕಿಂಗ್ ಲೋಕಪಾಲರು ಮುಂಬಯಿ, ಅಧ್ಯಕ್ಷರು
2. ಶ್ರೀ ಎಸ್. ದಿವಾಕರ್, ಅಖಿಲ ಭಾರತ ಠೇವಣಿದಾರರ ಸಂಘ
3. ಶ್ರೀ ಎಚ್.ಎನ್. ಸೈನರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ,
   ಭಾರತೀಯ ಬ್ಯಾಂಕುಗಳ ಸಂಘ
4. ಶ್ರೀ ಪಿ. ಸರನ್, ಮುಖ್ಯ ಪ್ರಧಾನ ವ್ಯವಸ್ಥಾಪಕರು, ಡಿಬಿಓಡಿ
5. ಶ್ರೀ ಕಾಝಾ ಸುಧಾಕರ್, ಮುಖ್ಯ ಪ್ರಧಾನ ವ್ಯವಸ್ಥಾಪಕರು,
   ಆರ್‌ಪಿಸಿಡಿ – ಸದಸ್ಯ ಕಾರ್ಯದರ್ಶಿ

ಕಾರ್ಯತಂಡದ ಕಾರ್ಯನಿಬಂಧನೆಗಳು ಈ ಮುಂದಿನಂತಿರುತ್ತವೆ:

(i) ಪ್ರತಿಯೊಬ್ಬ ಗ್ರಾಹಕನಿಗೆ ನೀಡುವ ವಿವಿಧ ಮೂಲಭೂತ ಬ್ಯಾಂಕಿಂಗ್/ಹಣಕಾಸು ಸೇವೆಯ ಬಗ್ಗೆ ತಿಳಿಸುವುದು ಹಾಗೂ ಅದಕ್ಕೆ ಯೋಜನೆಯನ್ನು ಅನ್ವಯಿಸುವುದು.

(ii) ಅಂಥ ಸೇವೆಗಳಿಗೆ ಶುಲ್ಕದ ಪ್ರಮಾಣವನ್ನು ನಿಗದಿಪಡಿಸಲು ಬ್ಯಾಂಕುಗಳು ಬಳಸುವ ಆಧಾರ/ವಿಧಾನವನ್ನು ಅಧ್ಯಯನ ಮಾಡುವುದು ಹಾಗೂ ಯುಕ್ತವೆಂದು ಕಂಡುಬರುವ ತತ್ವಗಳನ್ನು ರೂಪಿಸುವುದು.

(iii) ಮೇಲಿನ ಎರಡರಲ್ಲಿ ನಿರೂಪಿಸಿದ ತತ್ವದ ಆಧಾರದ ಮೇಲೆ ಸೇವಾ ಶುಲ್ಕವನ್ನು ನಿಗದಿಪಡಿಸುವ/ಬದಲಿಸುವ ಹಾಗೂ ಅಧಿಸೂಚಿಸುವುದರ ಔಚಿತ್ಯವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಒಂದು ಯೋಜನೆಯನ್ನು ರೂಪಿಸುವುದು.

(iv) ಮೇಲಿನ 3ರಲ್ಲಿ ತಿಳಿಸಲಾದ ರೀತಿಯಲ್ಲಿ ಆವಿಷ್ಕರಿಸುವ ಯೋಜನೆಗೆ ಸಂಬಂಧಪಟ್ಟಂತೆ ನ್ಯಾಯ ಸಮ್ಮತ ಆಚರಣಾ ಸಂಹಿತೆಯಲ್ಲಿ ಸೂಕ್ತ ಸೇರ್ಪಡೆಗಳನ್ನು ಸೂಚಿಸುವುದು.

(v) ಬ್ಯಾಂಕಿಂಗ್ ಸಂಹಿತೆ ಹಾಗೂ ಭಾರತ ಮಾನಕಗಳ ಮಂಡಲಿಗಳು ನ್ಯಾಯೋಚಿತ ಪದ್ಧತಿಗಳ ಸಂಹಿತೆಯ ಅನುಸರಣೆಯ ಬಗ್ಗೆ ಉಸ್ತುವಾರಿ ಮಾಡುವುದಕ್ಕಾಗಿ ಕ್ರಮಗಳನ್ನು ಸೂಚಿಸುವುದು.

(vi) ಇನ್ನಾವುದೇ ಇತರ ಸೂಕ್ತ ವಿಷಯ.

ತಂಡವು 2006ರ ಜುಲೈ ಅಂತ್ಯದ ವೇಳೆಗೆ ವರದಿಯನ್ನು ಸಲ್ಲಿಸಬೇಕಾಗಿದೆ.

ಬ್ಯಾಂಕುಗಳು ವಿಧಿಸುತ್ತಿರುವ ಸೇವಾ ಶುಲ್ಕಗಳು ಅನುಚಿತ ಹಾಗೂ ಅಪಾರದರ್ಶಕವೆಂದು ಹಾಗೂ ಈ ವಿಷಯದಲ್ಲಿ ಈಗಿರುವ ಸಾಂಸ್ಥಿಕ ಆಡಳಿತ ವ್ಯವಸ್ಥೆ ದಕ್ಷವಾಗಿಲ್ಲವೆಂದು ರಿಸರ್ವ್ ಬ್ಯಾಂಕಿಗೆ ಸಾರ್ವಜನಿಕರಿಂದ ದೂರುಗಳು ಬರುತ್ತಲೇ ಇವೆಯೆಂದು ವಾರ್ಷಿಕ ಕಾರ್ಯನೀತಿ ವಿವರಪಟ್ಟಿ 2006–07ರ 162ನೇ ಪ್ಯಾರಾದಲ್ಲಿ ತಿಳಿಸಲಾಗಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಬ್ಯಾಂಕ್ ಶುಲ್ಕಗಳ ನ್ಯಾಯ ಸಮ್ಮತತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಒಂದು ವ್ಯವಸ್ಥೆಯನ್ನು ರೂಪಿಸಲು ಒಂದು ಕಾರ್ಯತಂಡವನ್ನು ರಚಿಸಲು ಕಾರ್ಯನೀತಿಯಲ್ಲಿ ಸೂಚಿಸಲಾಗಿತ್ತು.

ಅಲ್ಪನಾ ಕಿಲ್ಲಾವಾಲಾ
ಮುಖ್ಯ ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2005–2006/1490